**ಪ್ರಾ.ಸಾ.ಸಂಖ್ಯೆಃ 11**
**ಚಾಸಾ ಸಂಖ್ಯೆಃ 13**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಕೋಟೆ ಉಪಸ್ಥಿತಿಃ ಮುಧೋಳ.**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ವೆಂಕಪ್ಪ ಪೂಜಾರಿ |
| ತಂದೆಯ ಹೆಸರುಃ | ತಿಮ್ಮಪ್ಪ @ ಲಕ್ಷ್ಮಣ |
| ವಯಸ್ಸುಃ | 46 ವರ್ಷ |
| ಉದ್ಯೋಗಃ | ಒಕ್ಕಲುತನ/ಕುರಿ ಸಾಕಾಣಿಕೆ |
| ವಾಸಃ | ಮಲ್ಲಾಪೂರ ಪಿ.ಎಲ್. |

**ಸಾಕ್ಷಿಯನ್ನು ದಿನಾಂಕಃ 26.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

**1.** ಚಾಸಾ-1, ಚಾಸಾ-11, 12, 14 ಇವರ ಪರಿಚಯವಿದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಆರೋಪಿತರು ಹಾಗೂ ಚಾಸಾ-10 ಇವರ ನಡುವೆ ಆದ ಜಗಳವನ್ನು ನಾನು ನೋಡಿಲ್ಲ, ಜಗಳ ಬಿಡಿಸಿಲ್ಲ, ಆ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟಿಸವಾಲು: ಸರ್ಕಾರಿ ಅಭಿಯೋಜಕರಿಂದಃ-**

**1.** ದಿ: **30.01.2023** ರಂದು ರಾತ್ರಿ ನಾನು ಚಾಸಾ-1 ಇವರ ಪಕ್ಕದ ಜಮೀನಿನಲ್ಲಿ ಕುರಿಗಳನ್ನು ತರುಬಿದ್ದಾಗ ಚಾಸಾ-10 ಹಾಗೂ 12 ಚಾಸಾ-1 ಇವರ ಜಮೀನಿನಲ್ಲಿ ಟ್ರ್ಯಾಕ್ಟರ ತೆಗೆದುಕೊಂಡು ಉಳುಮೆ ಮಾಡಲು ಬಂದಿದ್ದರು, ನಾನು ಗಲಾಟೆ ಕೇಳಿ ಎಚ್ಚರವಾಗಿ ನೋಡಿದಾಗ ಚಾಸಾ-10 ಇವನಿಗೆ ಯಾರೋ ಹೊಡೆಯುತ್ತಿದ್ದರು, ನಾವು ಹತ್ತಿರ ಹೋಗಿ ನೋಡಿದಾಗ ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಕೂಡಿಕೊಂಡು ಕೈಯಲ್ಲಿ ಕೊಯ್ತಾ, ಬಡಿಗೆ, ಕಲ್ಲು, ಕಬ್ಬಿಣದ ರಾಡಗಳನ್ನು ಹಿಡಿದುಕೊಂಡು ಬಂದು ಚಾಸಾ-10 ಇವನಿಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ.

**2.** ಆಗ ನಾನು, ಚಾಸಾ-**1** , **11, 14** ರವರು ಸೇರಿ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಈಗ ಓದಿ ಹೇಳಲಾದ ರೀತಿಯಲ್ಲಿ ಅಂದರೆ " ನಿನ್ನೆ ದಿನಾಂಕ: **30.01.2023** ರಂದು ………. ನಾನೂ ಕೂಡ ಹಾಜರಿದ್ದೆ" ಅಂತ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. (ಸದರಿ ಹೇಳಿಕೆಯನ್ನು ನಿಪಿ-**30** ಅಂತ ಗುರುತಿಸಲಾಯಿತು).

**4.** ಜಗಳವನ್ನು ಪ್ರತ್ಯಕ್ಷ್ಯವಾಗಿ ಕಂಡು, ಜಗಳ ಬಿಡಿಸಿ, ನಿಪಿ-**30** ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.</u>**

**<u>ಮರು ವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**